ಅ) ಲೋಕೋಪಯೋಗಿ ಇಲಾಖೆಯಲ್ಲಿ ಯಾವುದೇ ಪಂಚಾಯಿತಿ ಪ್ರಕರಣಗಳು ಇರುವುದಿಲ್ಲ.

ಆ) ಯಾವುದೂ ಇಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.

ಕೋಲಾರ ಜಿಲ್ಲಾ ಪರಿಷತ್ ತಾಂತ್ರಿಕ ಇಂಜಿನಿಯರಿಂಗ್ ವಿಭಾಗಕ್ಕೆ ಒದಗಿಸಿದ ಸಿಮೆಂಟ್

2069 - ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) 1990-91 ನೇ ಸಾಲಿಗೆ ಕೋಲಾರ ಜಿಲ್ಲಾ ಪರಿಷತ್ ತಾಂತ್ರಿಕ ಇಂಜಿನಿಯರಿಂಗ್ ವಿಭಾಗಕ್ಕೆ ಒದಗಿಸಿದ ಸಿಮೆಂಟ್ ಎಷ್ಟು?

ಆ) ಜನವರಿ 91 ರಿಂದ ಜುಲೈ 91 ರವರೆಗೆ ಒದಗಿಸಿದ ಒಟ್ಟು ಸಿಮೆಂಟ್ ಎಷ್ಟು?

ಇ) ಅವಶ್ಯಕತೆಗನುಗುಣವಾಗಿ ಸಿಮೆಂಟನ್ನು ಒದಗಿಸದ ಕಾರಣ ಅಭಿವೃದ್ಧಿ ಕೆಲಸಗಳು ಸ್ಥಗಿತಗೊಂಡಿರುವುದು ನಿಜವೇ?

ಈ) ಕೋಲಾರ ಜಿಲ್ಲಾ ಪರಿಷತ್ ತಾಂತ್ರಿಕ ವಿಭಾಗಕ್ಕೆ ಸಿಮೆಂಟ್ ಒದಗಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಕೋಲಾರ ಜಿಲ್ಲಾ ಪರಿಷತ್ ತಾಂತ್ರಿಕ ಇಂಜಿನಿಯರಿಂಗ್ ವಿಭಾಗಕ್ಕೆ 1990-91ನೇ ಸಾಲಿನಲ್ಲಿ 2391.60 ಮೆಟ್ರಿಕ್ ಟನ್‌ನಷ್ಟು ಸಿಮೆಂಟನ್ನು ಒದಗಿಸಲಾಗಿದೆ.

ಆ) ಜನವರಿ 1991 ರಿಂದ ಮಾರ್ಚ್ 1991 ರ ತನಕ ೧೯೪೨.೩೫ ಮೆಟ್ರಿಕ್ ಟನ್ ಸಿಮೆಂಟನ್ನು ಒದಗಿಸಲಾಗಿದೆ.

ಇ) ಅವಶ್ಯಕತೆಗನುಗುಣವಾಗಿ ಸಿಮೆಂಟನ್ನು ಒದಗಿಸದ ಕಾರಣ ಅಭಿವೃದ್ಧಿ ಕೆಲಸಗಳು ಸ್ಥಗಿತಗೊಂಡಿವೆ ಎಂಬುದು ಸರಿ ಅಲ್ಲ. ಕೋಲಾರ ಜಿಲ್ಲಾ ಪರಿಷತ್ ತಾಂತ್ರಿಕ ವಿಭಾಗಕ್ಕೆ 1990-91ನೇ ಸಾಲಿಗೆ ಅವಶ್ಯಕತೆಗನುಗುಣವಾಗಿ ಸಿಮೆಂಟನ್ನು ಸರಬರಾಜು ಮಾಡಲಾಗಿದೆ ಹಾಗೂ ಹೆಚ್ಚಿನ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲಾಗಿದೆ.

ಈ) ಕ್ರಮಬದ್ಧವಾಗಿ ಸಿಮೆಂಟ್ ಸರಬರಾಜು ಆಗುವ ಬಗ್ಗೆ ಸರ್ಕಾರದಿಂದ ಆದೇಶ ನೀಡಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರಿಗೆ ಶೌಚಾಲಯಗಳು

2046 - ಶ್ರೀ ನಾರಾಯಣರಾವ್ ಮನಹಳ್ಳಿ (ಬೀದರ್) : ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಗ್ರಾಮೀಣ ಪ್ರದೇಶಗಳಲ್ಲಿ ಮಹಿಳೆಯರಿಗೆ ಶೌಚಾಲಯಗಳ ಸಮಸ್ಯೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುವುದೇ?

ಅ) ಹಾಗಿದ್ದಲ್ಲಿ, ಈ ಸಮಸ್ಯೆಯನ್ನು ಪರಿಹರಿಸಲು ಕೈಗೊಂಡ ಕ್ರಮಗಳೇನು?

ಇ) ನಿರ್ಮಲೀಕರಣ ಯೋಜನೆಯಡಿಯಲ್ಲಿ 1990-91 ರ ಸಾಲಿನಲ್ಲಿ ಕಟ್ಟಲಾಗಿರುವ ಶೌಚಾಲಯಗಳ ಸಂಖ್ಯೆ ಎಷ್ಟು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರು)

ಅ) ಹೌದು, ಬಂದಿರುತ್ತದೆ.

ಆ) ಗ್ರಾಮೀಣ ಜನತೆಯ ಅದರಲ್ಲೂ ಪ್ರಮುಖವಾಗಿ ಮಹಿಳೆಯರು ಶೌಚಾಲಯಗಳಿಲ್ಲದೆ ಅನುಭವಿಸುತ್ತಿರುವ ಕಷ್ಟಗಳನ್ನು ಪರಿಗಣಿಸಿ ೧೯೮೪-೮೫ ರಿಂದ ಗ್ರಾಮೀಣ ಪ್ರದೇಶಗಳಲ್ಲಿ ಕಡಿಮೆ ವೆಚ್ಚದ ಶೌಚಾಲಯಗಳನ್ನು ಕಟ್ಟಿಸಿಕೊಡುವ ಕಾರ್ಯಕ್ರಮವನ್ನು ಸರ್ಕಾರವು ಹಮ್ಮಿಕೊಂಡಿದೆ. ಅಲ್ಲದೆ ಇಂತಹ ಶೌಚಾಲಯಗಳನ್ನು ಕಟ್ಟುವಿಕ್ಕೆ, ಅವುಗಳ ಉಪಯೋಗ ಹಾಗೂ ನಿರ್ವಹಣೆ ಬಗ್ಗೆ ಗ್ರಾಮೀಣ ಜನತೆಯಲ್ಲಿ ಅರಿವು ಮೂಡಿಸುವ ಕಾರ್ಯವೂ ಸಹ ಕೈಗೊಂಡಿರುತ್ತದೆ. ಈ ಕಾರ್ಯಕ್ರಮಕ್ಕೆ ಅಪಾರ ಹಣ ಬೇಕಾಗಿರುವುದರಿಂದ ಇದನ್ನು ಹಂತ ಹಂತವಾಗಿ ಕಾರ್ಯರೂಪಕ್ಕೆ ತರಲಾಗುತ್ತದೆ.

ಇ) 1990-91 ರ ಸಾಲಿನಲ್ಲಿ ವಿವಿಧ ನಿರ್ಮಲೀಕರಣ ಯೋಜನೆಗಳ ಅಡಿಯಲ್ಲಿ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಒಟ್ಟು ೮೪೦೩ ಕಡಿಮೆ ವೆಚ್ಚದ ಜಲಬದ್ಧ ಶೌಚಾಲಯಗಳನ್ನು ಕಟ್ಟಲಾಗಿದೆ.

ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿ

2039 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ರಾಜ್ಯ ಹಾಗೂ ರಾಷ್ಟ್ರೀಯ ಹೆದ್ದಾರಿಗಳ ಮೇಲೆ ಹಾಕಲಾಗಿರುವ ವೇಗ ತಡೆಯ ವಿನ್ಯಾಸದ ಸ್ಟ್ಯಾಂಡರ್ಡ್.

ಆ) ಈ ಮೇಲ್ಕಂಡ ಸ್ಟ್ಯಾಂಡರ್ಡನ್ನು ಹೆದ್ದಾರಿಗಳ ಮೇಲೆ ಅಳವಡಿಸಲಾಗಿದೆಯೇ?

ಇ) ಹಾಗಿಲ್ಲದ ಪಕ್ಷದಲ್ಲಿ ಸರ್ಕಾರವು ಈ ತಾಂತ್ರಿಕ ವಿನ್ಯಾಸವಿಲ್ಲದ ವೇಗ ತಡೆಗಳನ್ನು ತೆಗೆಸಿ ತಾಂತ್ರಿಕ ವಿನ್ಯಾಸವುಳ್ಳ ರಂಬಲ್ ಸ್ಟ್ರೀಪ್‌ಗಳನ್ನು 60 ದಿನಗಳಲ್ಲಿ ಹಾಕುವರೇ?

ಶ್ರೀ ಜಿ.ಹೆಚ್. ಅಶ್ವತ್ಥರೆಡ್ಡಿ (ಲೋಕೋಪಯೋಗಿ ಸಚಿವರು)

ಅ) ಕೇಂದ್ರ ಸರ್ಕಾರವು ಸೂಚಿಸಿರುವ ವಿನ್ಯಾಸ ವಿಶಿಷ್ಟ ವಿವರಣೆಗಳಿಗೆ ಅನುಗುಣವಾಗಿರುತ್ತದೆ.

ಆ) ಹೌದು.

ಇ) ಹಾಕಲಾಗುವ ಎಲ್ಲಾ ವೇಗ ತಡೆಗಳು ಸಹ ಮೇಲ್ಕಂಡ ಸುತ್ತೋಲೆಗೆ ಅನುಗುಣವಾಗಿಯೇ ಇರಬೇಕು. ವಿನ್ಯಾಸಕ್ಕನುಗುಣವಾಗಿಲ್ಲದ ವೇಗತಡೆಗಳು ಇದ್ದಲ್ಲಿ ಅಂತಹವನ್ನು ಕೂಡಲೇ ತೆಗೆಸಿ, ವಿನ್ಯಾಸಕ್ಕನುಗುಣವಾಗಿ ರಂಬಲ್ ಸ್ಟ್ರೀಪ್ ಹಾಕಿಸುವಂತೆ ಆದೇಶ ನೀಡಲಾಗಿದೆ.